**ಸಾಕ್ಷಿಯನ್ನು ದಿಃ 25.03.2026 ರಂದು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**6 ರಿಂದ 10 ಪ್ರತಿವಾದಿಗಳು ಪ್ರತಿವಾದ ಪತ್ರ ಸಲ್ಲಿಸಿದ ನಂತರ ಪಾಟೀ ಸವಾಲುಃ 6 ರಿಂದ 10 ಪ್ರತಿವಾದಿಗಳ ಪರ ಶ್ರೀ ಎಸ್.ಎನ್.ಕೆ ವಕೀಲರಿಂದಃ-**

ಮಲ್ಲಯ್ಯ ಬಿನ್ ಮಲ್ಲಯ್ಯ ರವರಿಗೆ ಗ್ರ್ಯಾಂಟ್ ಆದ ಬಗ್ಗೆ ಗ್ರ್ಯಾಂಟ್ ಸರ್ಟಿಫಿಕೇಟ್ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ಗ್ರ್ಯಾಂಟ್ ಸರ್ಟಿಫಿಕೇಟ್ ಅನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ. 1 ರಿಂದ 24 ರ ದಾಖಲೆಗಳಲ್ಲಿ ಗ್ರ್ಯಾಂಟ್ ಸರ್ಟಿಫಿಕೇಟ್ ಇಲ್ಲ ಎಂದರೆ ಸರಿಯಲ್ಲ. ಮಲ್ಲಯ್ಯ ಬಿನ್ ಮಲ್ಲಯ್ಯ ರವರ ಹೆಂಡತಿ ಬಸಮ್ಮ. ಮಲ್ಲಯ್ಯನ ಮಗನ ಹೆಂಡತಿ ಹೆಸರು ಮುತ್ತಮ್ಮ.ಅದನ್ನು ಎಲ್ಲಿಯೂ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ನಮ್ಮ ತಂದೆ ಮಲ್ಲಯ್ಯ ರವರಿಗೆ ಕುಳ್ಳಯ್ಯ ಮತ್ತು ಶಿವಮಲ್ಲು ಹೊರತು ಪಡಿಸಿ ಇನ್ನು ಇಬ್ಬರು ಮಕ್ಕಳು ಇದ್ದಾರೆ ಎಂದರೆ ಸರಿಯಲ್ಲ. ಶಿವಮಲ್ಲಮ್ಮ ಎಂಬುವವರು ಇದ್ದರು ಎಂದು ತೋರಿಸಲು ವಾದ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಆರ್.ಟಿ.ಸಿಗಳಲ್ಲಿ ನಮ್ಮ ತಂದೆ ಹೆಸರೆ ಇರುತ್ತದೆ. ಈಗಿನ ಕಂಪ್ಯೂಟರೈಜ್ಡ್ ಆರ್.ಟಿ.ಸಿಗಳಲ್ಲಿ ರಾಜಮ್ಮನ ಹೆಸರು ಇರುತ್ತದೆ. ದಾವಾ ಸರ್ವೆ ನಂ. 41/1 ಎ ರ ಸ್ವತ್ತು 1 ರಿಂದ 3 ನೇ ಪ್ರತಿವಾದಿ ಹೆಸರಿನಲ್ಲಿ ಖಾತೆ ಇದೆ ಎಂದರೆ ಸರಿಯಲ್ಲ. ಅವರ ಹೆಸರಿನಲ್ಲಿ ಇದ್ದಂತಹ ಆರ್.ಟಿ.ಸಿ ಗಳನ್ನು 6 ರಿಂದ 10 ನೇ ಪ್ರತಿವಾದಿಗಳು ತಹಸೀಲ್ದಾರರ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದಾರೆ ಎಂದರೆ ಸರಿಯಲ್ಲ. ಸದರಿ ಸ್ವತ್ತಿಗೆ ಸಂಬಂಧಿಸಿಂತೆ 2/2009 ರಂತೆ 5 ರಿಂದ 10 ಪ್ರತಿವಾದಿಗಳು ದಾವೆ ಹೂಡಿದ್ದು, ಅದರಲ್ಲಿ ಮಾಲೀಕರೆಂದು ಘೋಷಿಸಿರುತ್ತಾರೆ ಎಂದರೆ ಸರಿಯಲ್ಲ. ಎಂ.ಆರ್ ನಂ. 25/1995-96 ಮ್ಯೂಟೇಶನ್ ಅನ್ನು ಉಪವಿಭಾಗಾಧಿಕಾರಿ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿದ್ದಿರಾ ಎಂದರೆ ಮಾಡಿಲ್ಲವೆನ್ನುತ್ತಾರೆ. ಸರ್ವೆ ನಂ. 41/1 ಎ ರ ಸ್ವತ್ತು 6 ರಿಂದ 10 ನೇ ಪ್ರತಿವಾದಿಗಳಿಗೆ ಸೇರಿದ್ದು ಎಂದು ನ್ಯಾಯಾಲಯದಲ್ಲಿ ಆದೇಶ ಮಾಡಿದ

ನಂತರ ಅದನ್ನು ಪ್ರಶ್ನೆ ಮಾಡಿದ್ದಿರಾ ಎಂದರೆ ಸಾಕ್ಷಿ ನ್ಯಾಯಾಲಯದಿಂದಲೆ ಅವರಿಗೆ ನೊಟೀಸು ಹೋಗಿದೆ ಎನ್ನುತ್ತಾರೆ.

ನಿಪಿ. 1 ರ ರೆಕಾರ್ಡ್ಸ್ ಆಫ್ ರೈಟ್ ದಾಖಲೆಯಲ್ಲಿ ಕ್ರಯ ಎಂದು ನಮೂದು ಇದ್ದು, ವಾದ ಪತ್ರದಲ್ಲಿ ಗ್ರ್ಯಾಂಟ್ ಆಗಿದೆ ಎಂದು ಹೇಳಿದ್ದು, ಯಾವುದು ಸತ್ಯ ಎಂದರೆ ಸಾಕ್ಷಿ ಗ್ರ್ಯಾಂಟ್ ಆಗಿರುವುದು ಸತ್ಯ ಎನ್ನುತ್ತಾರೆ. ನಿಪಿ. 25 ಮರಣ ಪ್ರಮಾಣ ಪತ್ರದಲ್ಲಿ ತಾಯಿ ಮತ್ತು ತಂದೆ ಹೆಸರು ನಮೂದಾಗಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಯನ್ನು ಕೇಸ್ ಗಾಗಿ ಸೃಷ್ಟಿಸಿಕೊಂಡ ಕಾರಣ ತಾಯಿ ಮತ್ತು ತಂದೆ ಹೆಸರು ನಮೂದಾಗಿಲ್ಲ ಎಂದರೆ ಸರಿಯಲ್ಲ. ನಿಪಿ. 26 ರ ಮರಣ ಪ್ರಮಾಣ ಪತ್ರದಲ್ಲೂ ಸಹ ತಾಯಿ ಹೆಸರು ನಮೂದಾಗಿಲ್ಲ ಎಂದರೆ ಸರಿಯಲ್ಲ. ನಿಪಿ. 27 ರ ದಾಖಲೆಯಲ್ಲಿ ನಮೂದಿಸಿರುವುದು ಸಹ ಸುಳ್ಳು ಎಂದರೆ ಸರಿಯಲ್ಲ. ಅದರಲ್ಲೂ ನನ್ನ ಉಳಿದ ತಂಗಿಯರ ಹೆಸರನ್ನು ನಮೂದಿಸಿಲ್ಲ ಎಂದರೆ ಸರಿಯಲ್ಲ. ಮಲ್ಲಯ್ಯ ಬಿನ್ ಮಲ್ಲಯ್ಯ ರವರ ವಾರಸುದಾರರು 6 ರಿಂದ 10 ನೇ ಪ್ರತಿವಾದಿಗಳು ಎಂದರೆ ಸರಿಯಲ್ಲ, ನಾವು ಅವರ ವಾರಸುದಾರರು ಎನ್ನುತ್ತಾರೆ. 6 ರಿಂದ 10 ನೇ ಪ್ರತಿವಾದಿಗಳು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದಾರೆ, ಆರ್.ಟಿ.ಸಿಯೂ ಅವರ ಹೆಸರಿನಲ್ಲೆ ಇದೆ ಎಂದರೆ ಸಾಕ್ಷಿ ಅವರ ಹೆಸರಿನಲ್ಲಿ ಆರ್.ಟಿ.ಸಿ ಇದೆ, ನಾವೆ ಮಾಲೀಕರು ಮತ್ತು ನಾವೆ ಸ್ವಾಧೀನದಲ್ಲಿ ಇದ್ದೇವೆ ಎನ್ನುತ್ತಾರೆ. ಈ ದಾವೆಯಲ್ಲಿನ ದಾವಾ ಸ್ವತ್ತಿನಲ್ಲಿ ನಮಗೆ ಯಾವುದೆ ಹಕ್ಕು ಹಿತಾಸಕ್ತಿ ಇಲ್ಲದಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮಲ್ಲಯ್ಯ ಬಿನ್ ಮಲ್ಲಯ್ಯ ರವರಿಗೆ ಗ್ರ್ಯಾಂಟ್ ಆದ ಬಗ್ಗೆ ದಾಖಲೆ ನನ್ನ ಬಳಿ ಇಲ್ಲದ ಕಾರಣ ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಅಂತಹ ದಾಖಲೆ ಸಂಬಂಧಪಟ್ಟ ಇಲಾಖೆಗೆ ಅರ್ಜಿ ಸಲ್ಲಿಸಿ ಅಲ್ಲಿಂದ ಯಾವುದೆ ಹಿಂಬರಹ ಪಡೆದುಕೊಳ್ಳದೆ ನ್ಯಾಯಾಲಯದಲ್ಲಿ ಅದನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ. 1 ರಲ್ಲಿ ನಮೂದಾಗಿರುವ ಕ್ರಯದಂತೆ ಯಾವುದೆ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ

ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. 6 ರಿಂದ 10 ನೇ ಪ್ರತಿವಾದಿಗಳು ಅಸಲು ದಾವೆ ಸಂಖ್ಯೆ 2/2009 ರಂತೆ ದಾವೆಯನ್ನು ಹಾಕಿದ್ದು, ಅಲ್ಲಿಂದ ದಾಖಲೆಗಳನ್ನು ಪಡೆದು ಇಲ್ಲಿ ಹಾಜರು ಪಡಿಸಿದ್ದೇನೆ ಎಂದರೆ ಸರಿಯಲ್ಲ. ದಾವೆಯಲ್ಲಿ ಕೇಳಿದಂತೆ ಪರಿಹಾರ ಕೇಳಲು ಯಾವುದೆ ರೀತಿಯ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.6 ರಿಂದ 10 ನೇ ಪ್ರತಿವಾದಿಗಳು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದು ಆರ್.ಟಿ.ಸಿ ಸಹ ಅವರ ಹೆಸರಿನಲ್ಲಿ ಇದ್ದು, ಅವರಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)
ಓ ಹೇ ಕೇ ಸ ಇದೆ.,

(ಭಾಗ್ಯಮ್ಮ)
**1** ನೇ ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.